# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\1163\2017\ಸನಿಕಾಸ-1 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:25/10/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಎನ್.ಜೆ.ಶಂಕರ್ ಬಿನ್ ಜವರನಾಯ್ಕ, ಜೆಡಿ ಕಾಂಪ್ಲೆಕ್ಸ್, ನಿಲುವಾಗಿಲು ಗ್ರಾಮ, ಕಸಬಾ ಹೋಬಳಿ, ಹುಣಸೂರು ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕ್ ಕಸಬಾ ಹೋಬಳಿ ನಿಲುವಾಗಿಲು ಗ್ರಾಮ ಜೆಡಿ ಕಾಂಪ್ಲೆಕ್ಸ್ ಹಿಂಭಾಗದ ನಿವಾಸಿಯಾದ ಶ್ರೀ.ಎನ್.ಜೆ.ಶಂಕರ್ ಬಿನ್ ಜವರ ನಾಯ್ಕ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಹುಣಸೂರು ಪಟ್ಟಣ ನಗರಸಭೆಯ ಪೌರಾಯುಕ್ತರಾದ ಶ್ರೀ.ಎಸ್.ಶಿವಪ್ಪನಾಯಕ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಮೈಸೂರು ಜಿಲ್ಲೆ ಹುಣಸೂರು ನಗರಸಭೆ ವ್ಯಾಪ್ತಿಯ ಚಿಕ್ಕಹುಣಸೂರು ವಾರ್ಡ್ ನಂ.9ರ ಖಾತಾ ನಂ.204/184ರ 88x50 ಅಡಿ ಅಳತೆಯಲ್ಲಿ ಶೀಟಿನ ಮನೆ ಮತ್ತು ಖಾಲಿ ನಿವೇಶನವನ್ನು ದಿ:04/09/15ರಂದು ಕ್ರಯದ ಮೂಲಕ ಪಡೆದಿದ್ದು, ಅದರಂತೆ ದಿ:17/10/15ರಂದು ತಮ್ಮ ಹೆಸರಿಗೆ ಖಾತಾ ಬದಲಾವಣೆಯಾಗಿದೆ. ಅಲ್ಲದೇ, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಎದುರುದಾರರು ನಮೂನೆ-3ನ್ನು ಸಹ ನೀಡಿದ್ದಾರೆ. ಆ ನಂತರ ಹೊಸ ವರ್ಷಕ್ಕೆ ಸಂಬಂಧಪಟ್ಟಂತೆ ನಮೂನೆ-3ನ್ನು ಕೋರಿ ಎದುರುದಾರರ ಕಛೇರಿಗೆ ಅರ್ಜಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ:-

ದಿ:04/10/16ರಂದು ದೂರುದಾರರು ನೀಡಲಾದ ಅರ್ಜಿಗೆ ಸಂಬಂಧಪಟ್ಟಂತೆ ಗ್ರಾಮಸ್ಥರು ತಕರಾರು ಸಲ್ಲಿಸಿ ಸದರಿ ಜಾಗವು ಹುಣಸೂರಿನ ಸರ್ಕಾರಿ ಪ್ರೌಢ ಶಾಲೆಗೆ ಸೇರಿರುವ ಜಾಗವೆಂದು, ಅದರಂತೆ ಈಗಾಗಲೇ ಅಸಲು ದಾವಾ ಸಂ:194/2007ರ ತೀರ್ಪಿನಂತೆ ಪ್ರಕರಣ ಇತ್ಯರ್ಥವಾಗಿದೆ. ಅಲ್ಲದೇ, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನಮೂನೆ-3ನ್ನು ನೀಡಬಾರದೆಂದು ತಕರಾರು ನೀಡಿದ್ದಾರೆ. ಈ ಬಗ್ಗೆ ಕಾನೂನು ಸಲಹೆಗಾರರ ಸಲಹೆಯನ್ನು ಕೇಳಲಾಗಿ, ಸದರಿ ಸ್ವತ್ತು ಮಂಡಲ ಪಂಚಾಯತ್ ಕಛೇರಿಯಿಂದ ಪುರಸಭೆಗೆ ಹಸ್ತಾಂತರಗೊಂಡಿರುವ ಕಾರಣ ದಾಖಲೆಗಳನ್ನು ಹಾಜರುಪಡಿಸುವಂತೆ ದೂರುದಾರರಿಗೆ ನೋಟೀಸ್ ನೀಡಿದೆ. ಆದರೆ, ದೂರುದಾರರು ಯಾವುದೇ ದಾಖಲೆಗಳನ್ನು ನೀಡಿಲ್ಲ. ಆ ಕಾರಣ, ನಮೂನೆ-3ನ್ನು ನೀಡಿಲ್ಲವೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸದರಿ ಸ್ವತ್ತು ಮೂಲತಃ ದೂರುದಾರರಿಗೆ ಕ್ರಯಕ್ಕೆ ನೀಡಿದ ಶ್ರೀ.ಹೆಚ್.ಎಸ್.ಮಹದೇವ ನಾಯಕ್ ಬಿನ್ ಸಿದ್ದೂರ ನಾಯಕ್ ರವರಿಗೆ ಸಂಬಂಧಿಸಿದ್ದು, ಸದರಿಯವರು ಈ ಹಿಂದೆ ಎದುರುದಾರರ ವಿರುದ್ಧ ಹುಣಸೂರು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಒಎಸ್ ನಂ.194/2007ರಂತೆ ಪ್ರಕರಣ ದಾಖಲಿಸಿದ್ದು, ನ್ಯಾಯಾಲಯವು ಎದುರುದಾರರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ಆದೇಶಿಸಿದೆ. ಅಲ್ಲದೇ, ಸದರಿ ಸ್ವತ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ಶ್ರೀ.ಹೆಚ್.ಎಸ್.ಮಹದೇವ ನಾಯಕ್ ರವರ ಹೆಸರಿನಲ್ಲಿದೆ. ಅದರಂತೆ, ಸದರಿ ಸ್ವತ್ತನ್ನು ದೂರುದಾರರು ಶ್ರೀ.ಹೆಚ್.ಎಸ್.ಮಹದೇವ ನಾಯಕ್ ರವರಿಂದ ದಿ:14/09/15ರಂದು ಕ್ರಯಕ್ಕೆ ಪಡೆದಿದ್ದು, ಅದರಂತೆ ಎಲ್ಲಾ ದಾಖಲೆಗಳು ಸಹ ದೂರುದಾರರ ಹೆಸರಿಗೆ ಬದಲಾವಣೆಯಾಗಿ 2015-16ನೇ ಸಾಲಿನವರೆಗೂ ಸಹ ನಮೂನೆ-3ನ್ನು ನೀಡಿದ್ದಾರೆ. ಆ ನಂತರ, ದೂರುದಾರರು ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನಮೂನೆ-3ನ್ನು ಕೋರಿ ಎದುರುದಾರರ ಕಛೇರಿಗೆ ಅರ್ಜಿ ಸಲ್ಲಿಸಿದ್ದು, ಆ ಸಂದರ್ಭದಲ್ಲಿ ಸದರಿ ಗ್ರಾಮದ ಕೆಲವು ವ್ಯಕ್ತಿಗಳು ನಮೂನೆ-3ನ್ನು ನೀಡದಂತೆ ಎದುರುದಾರರಿಗೆ ತಕರಾರು ನೀಡಿರುವುದು ಕಂಡು ಬಂದಿದೆ. ಆದರೆ, ಸದರಿ ಸ್ವತ್ತು ಚಿಕ್ಕ-ಹೊಸೂರು ಪ್ರೌಢ ಶಾಲೆಗೆ ಸೇರಿರುವ ಬಗೆಗಿನ ದಾಖಲೆಗಳನ್ನು ತಕರಾರಿನ ಜೊತೆ ಸಾರ್ವಜನಿಕರು ಹಾಜರುಪಡಿಸಿಲ್ಲ. ಅದೇ ರೀತಿ, ಈ ಬಗ್ಗೆ ಎದುರುದಾರರು ಸಹ ಸದರಿ ಸ್ವತ್ತು ಸರ್ಕಾರಿ ಪ್ರೌಢ ಶಾಲೆಗೆ ಸೇರಿದ ಸ್ವತ್ತು ಎಂಬ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಸ್ವತ್ತನ್ನು ದೂರುದಾರರು ಕ್ರಯಕ್ಕೆ ಪಡೆದು ಎಲ್ಲಾ ದಾಖಲೆಗಳು ಸಹ ದೂರುದಾರರ ಹೆಸರಿಗೆ ಬಂದಿರುವುದರಿಂದ, ಎದುರುದಾರರು ಸದರಿ ಸ್ವತ್ತಿಗೆ ಸಂಬಂದಪಟ್ಟಂತೆ ನಮೂನೆ-3ನ್ನು ದೂರುದಾರರ ಹೆಸರಿಗೆ ಕ್ರಯ ಪತ್ರದಂತೆ ನೀಡಬೇಕಾಗಿದೆ. ಆದರೆ, ಎದುರುದಾರರು ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯ ಪತ್ರದಂತೆ ನಮೂನೆ-3ನ್ನು ನೀಡದೇ ಅನಾವಶ್ಯಕ ತೊಂದರೆ ನೀಡಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಆದ್ದರಿಂದ, ಮೈಸೂರು ಜಿಲ್ಲೆ ಹುಣಸೂರು ನಗರಸಭೆ ವ್ಯಾಪ್ತಿಯ ಚಿಕ್ಕಹುಣಸೂರು ವಾರ್ಡ್ ನಂ.9ರ ಖಾತಾ ನಂ.204/184ರ 88x50 ಅಡಿ ಅಳತೆಯ ಸ್ವತ್ತಿಗೆ ಸಂಬಂಧಪಟ್ಟಂತೆ ನಮೂನೆ-3ನ್ನು ದೂರುದಾರರ ಹೆಸರಿಗೆ ಕ್ರಯ ಪತ್ರದಂತೆ ನೀಡಲು ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 23/10/17.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.